TIMKEN

**Mandar Vasmatkar**
Company Secretary & Chief-Compliance
mandar.vasmatkar@timken.com

13 November, 2023

| | |
|---|---|
| The Secretary<br>National Stock Exchange of India Ltd.<br>Exchange Plaza,<br>Plot no. C/1, G Block,<br>Bandra Kurla Complex, Bandra (East),<br>Mumbai – 400 051. | The Secretary<br>BSE Ltd.<br>Phiroze Jeejeebhoy Towers,<br>Dalal Street,<br>Mumbai - 400 001. |
| **NSE Symbol: TIMKEN** | **Scrip Code: 522113** |

Dear Sir/Madam,

**Sub: Newspaper Publication**

We enclose herewith copies of Unaudited Financial Results for the quarter and half year ended 30 September, 2023 published in Financial Express (English) and Prajavani (Kannada) on 12 November, 2023.

We request you to kindly take this on record.

Thanking you,

**Yours sincerely,**
**For Timken India Limited**

MANDAR MOHANIRAJ VASMATKAR
Digitally signed by MANDAR MOHANIRAJ VASMATKAR
Date: 2023.11.13 12:00:26 +05'30'

**Mandar Vasmatkar**
**Company Secretary**
**& Chief - Compliance**

ಮೇಖ್ರಿ ವೃತ್ತದಲ್ಲಿ ಪಾದಚಾರಿಗಳ ಗೋಳು ● ಮನವಿ ನೀಡಿದರೂ ಸ್ಪಂದಿಸದ ಬಿಬಿಎಂಪಿ ಆಡಳಿತ

# ಸ್ಕೈವಾಕ್ ಅಸುರಕ್ಷಿತ; ಕೆಟ್ಟು ನಿಂತ ಲಿಫ್ಟ್

● ಸಂತೋಷ ಜಿಗಳಿಕೊಪ್ಪ



ಬಳ್ಳಾರಿ ರಸ್ತೆಯ ಮೇಖ್ರಿ ವೃತ್ತದ ರಸ್ತೆಯಲ್ಲಿ ಸಂಚರಿಸುತ್ತಿರುವ ವಾಹನಗಳು ಹಾಗೂ ಸ್ಕೈವಾಕ್ ಮೆಟ್ಟಿಲು ಬಳಿ ಕೆಟ್ಟಿರುವ ಲಿಫ್ಟ್ ಬಾಗಿಲು ಮುಚ್ಚಿರುವುದು



ಬಳ್ಳಾರಿ ರಸ್ತೆಯ ಮೇಖ್ರಿ ವೃತ್ತದಲ್ಲಿರುವ ಸ್ಕೈವಾಕ್ ಇಳಿಯುತ್ತಿರುವ ವೃದ್ಧರು
– ಪ್ರಜಾವಾಣಿ ಚಿತ್ರಗಳು/ಕಿಶೋರ್ ಕುಮಾರ್ ಬೋಳಾರ್

**ಬೆಂಗಳೂರು:** ಕೆಟ್ಟು ನಿಂತು 6 ತಿಂಗಳಾದರೂ ದುರಸ್ತಿಯಾಗದ ಲಿಫ್ಟ್, ಮಾರ್ಗದುದ್ದಕ್ಕೂ ಅಪಾಯಕ್ಕೆ ಆಹ್ವಾನ ನೀಡುವ ಜಾಗಗಳು. ಸಾಲುಗಟ್ಟಿ ಸಂಚರಿಸುವ ವಾಹನಗಳನ್ನು ಮೇಲಿಂದ ನೋಡಿ ತಲೆ ಸುತ್ತಿ ಬೀಳುವ ಭಯದಲ್ಲಿ ಸಂಚರಿಸುವ ವೃದ್ಧರು. ಅವ್ಯವಸ್ಥೆಯಿಂದಾಗಿ ಒಂದು ತುದಿಯಿಂದ ಮತ್ತೊಂದು ತುದಿಗೆ ಆತಂಕದಲ್ಲಿ ಸಂಚರಿಸುವ ಶಾಲಾ ಮಕ್ಕಳು ಹಾಗೂ ಶಿಕ್ಷಕರು...

ಇದು, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಬಳ್ಳಾರಿ ರಸ್ತೆಯ ಮೇಖ್ರಿ ವೃತ್ತದಲ್ಲಿರುವ ಸ್ಕೈವಾಕ್ ಸ್ಥಿತಿ. ಅತಿಹೆಚ್ಚು ವಾಹನಗಳು ಸಂಚರಿಸುವ ಈ ರಸ್ತೆಯಲ್ಲಿ ನಿತ್ಯವೂ ದಟ್ಟಣೆ ಸಾಮಾನ್ಯ. ವಾಹನಗಳ ನಡುವೆ ನುಸುಳಿಕೊಂಡು ಒಂದು ಬದಿಯಿಂದ ಮತ್ತೊಂದು ಬದಿಗೆ ಪಾದಚಾರಿಗಳು ಸಂಚರಿಸುವ ಸಂದರ್ಭದಲ್ಲಿ ಅಪಘಾತಗಳು ಉಂಟಾಗಿರುವ ಪ್ರಕರಣಗಳೂ ದಾಖಲಾಗಿವೆ.

ಇದೇ ಕಾರಣಕ್ಕೆ ಪಾದಚಾರಿಗಳ ಅನುಕೂಲಕ್ಕಾಗಿ ಮೇಖ್ರಿ ವೃತ್ತದಲ್ಲಿ ಸ್ಕೈವಾಕ್ ನಿರ್ಮಿಸಲಾಗಿದೆ. ನಿರ್ವಹಣೆ ಕೊರತೆ ಹಾಗೂ ಅಸುರಕ್ಷಿತ ಕ್ರಮಗಳಿಂದಾಗಿ ಭಯದಲ್ಲಿಯೇ ಜನರು ಸ್ಕೈವಾಕ್ ಬಳಸುತ್ತಿದ್ದಾರೆ.

ವಾಯುಸೇನೆ ಕಮಾಂಡೊ ತರಬೇತಿ ಕೇಂದ್ರಕ್ಕೆ ಹೊಂದಿಕೊಂಡಂತೆ ಬಸ್ ತಂಗುದಾಣ (ಆರ್.ಟಿ.ನಗರದ ಗಂಗಾನಗರ ಬಳಿಯ ಅಶ್ವತ್ಥನಗರ) ನಿರ್ಮಿಸಲಾಗಿದೆ. ನಗರದಿಂದ ಹೆಬ್ಬಾಳ ಹಾಗೂ ವಿಮಾನ ನಿಲ್ದಾಣದತ್ತ ಹೋಗುವ ಬಸ್‌ಗಳು ಇದೇ ತಂಗುದಾಣಕ್ಕೆ ಬಂದು ಮುಂದಕ್ಕೆ ಸಾಗುತ್ತದೆ. ಅದೇ ರೀತಿ ಹೆಬ್ಬಾಳ ಹಾಗೂ ವಿಮಾನ ನಿಲ್ದಾಣದಿಂದ ನಗರಕ್ಕೆ ಬರುವ ಬಸ್‌ಗಳು, ಎದುರು ಬದಿಯ ರಸ್ತೆಯಲ್ಲಿರುವ ಬಸ್ ತಂಗುದಾಣದ ಮೂಲಕ ಸಂಚರಿಸುತ್ತವೆ.

ಎರಡು ನಿಲ್ದಾಣಗಳಿಗೆ ಹಾಗೂ ಅಕ್ಕ-ಪಕ್ಕದ ಪ್ರದೇಶಗಳಿಗೆ ಸಂಚರಿಸಲು ಪಾದಚಾರಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಬಿಬಿಎಂಪಿ ವತಿಯಿಂದ 5.5 ಮೀಟರ್ ಎತ್ತರದ ಸ್ಕೈವಾಕ್ ನಿರ್ಮಿಸಿ, 2017ರಲ್ಲಿ ಜನರ ಸೇವೆಗೆ ಮುಕ್ತಗೊಳಿಸಲಾಗಿದೆ. ಕೇಂದ್ರೀಯ ವಿದ್ಯಾಲಯ, ಜಿಆರ್‌ವಿ ಕಾಲೇಜ್, ಸಿಬಿಐ ಕಚೇರಿ, ಜಿಎಸ್‌ಟಿ ಕಮಿಷನರ್ ಕಚೇರಿ, ವಾಯುಪಡೆ ಕಮಾಂಡೊ ತರಬೇತಿ ಕೇಂದ್ರ ಹಾಗೂ ಇತರೆ ಪ್ರಮುಖ ಸ್ಥಳಗಳು ಈ ಸ್ಕೈವಾಕ್‌ನ ಅಕ್ಕ-ಪಕ್ಕದಲ್ಲಿವೆ.

'ವಿಪರೀತ ದಟ್ಟಣೆ ಇರುವ ಬಳ್ಳಾರಿ ರಸ್ತೆಯಲ್ಲಿ ಸ್ಕೈವಾಕ್ ನಿರ್ಮಾಣ ಮಾಡಿರುವುದು ಪಾದಚಾರಿಗಳಿಗೆ ಹೆಚ್ಚು ಅನುಕೂಲವಾಗಿದೆ. ಆದರೆ, ನಿರ್ವಹಣೆ ಇಲ್ಲದಿದ್ದರಿಂದ ಸ್ಕೈವಾಕ್ ಬಳಸಲು ಜನರು ಹಿಂದೇಟು ಹಾಕುತ್ತಿದ್ದಾರೆ' ಎಂದು ಸ್ಥಳೀಯ ನಿವಾಸಿ ಆರ್.ಲಕ್ಷ್ಮಿ ತಿಳಿಸಿದರು.

'ನಿತ್ಯವೂ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗಿ ಬರುತ್ತೇನೆ. ಮೇಖ್ರಿ ವೃತ್ತದಲ್ಲಿ ರಸ್ತೆ ದಾಟಲು ಸ್ಕೈವಾಕ್ ಬಳಸುತ್ತೇನೆ. ಆರಂಭದಲ್ಲಿ ಸ್ಕೈವಾಕ್ ನಿರ್ವಹಣೆ ಚೆನ್ನಾಗಿತ್ತು. ಇತ್ತೀಚಿನ ಕೆಲ ತಿಂಗಳಿನಿಂದ ಯಾರೂ ನಿರ್ವಹಣೆ ಮಾಡುತ್ತಿಲ್ಲ. ಸ್ಕೈವಾಕ್ ಮೇಲೆ ನಮೂದಿಸಿರುವ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿದರೂ ಸ್ಪಂದನೆ ಸಿಗುತ್ತಿಲ್ಲ' ಎಂದು ಅವರು ದೂರಿದರು.

**ಲಿಫ್ಟ್ ಕೆಟ್ಟಿದ್ದರಿಂದ ವೃದ್ಧರಿಗೆ ತೊಂದರೆ:** 'ಸ್ಕೈವಾಕ್‌ನ ಎರಡೂ ಬದಿಯ ಲಿಫ್ಟ್‌ಗಳು ಕೆಟ್ಟು ಆರು ತಿಂಗಳಾಗಿದೆ. 5.5 ಮೀಟರ್ ಎತ್ತರದ ಸ್ಕೈವಾಕ್ ಏರಿ, ನಂತರ ರಸ್ತೆಗೆ ಇಳಿದು ಹೋಗಲು ವೃದ್ಧರು ಕಷ್ಟಪಡುತ್ತಿದ್ದಾರೆ. ಹಲವರು, ಸ್ಕೈವಾಕ್ ಇಳಿದ ಕೂಡಲೇ ರಸ್ತೆ ಬದಿಯಲ್ಲಿ ಕುಳಿತು ವಿಶ್ರಾಂತಿ ಪಡೆದು ಮುಂದಕ್ಕೆ ಹೋಗುತ್ತಿದ್ದಾರೆ' ಎಂದು ಸ್ಥಳೀಯ ನಿವಾಸಿ ರಾಹುಲ್ ಕುಮಾರ್ ಹೇಳಿದರು.

'ಲಿಫ್ಟ್ ಸರಿಪಡಿಸುವಂತೆ ಸ್ಥಳೀಯರೆಲ್ಲರೂ ಸೇರಿ ಬಿಬಿಎಂಪಿಗೆ ದೂರು ನೀಡಿದ್ದೇವೆ. ಆದರೆ, ಇದುವರೆಗೂ ಲಿಫ್ಟ್ ಸರಿಪಡಿಸಿಲ್ಲ. ಅಧಿಕಾರಿಗಳು ತುರ್ತಾಗಿ ಲಿಫ್ಟ್ ದುರಸ್ತಿ ಮಾಡಬೇಕು' ಎಂದು ಅವರು ಆಗ್ರಹಿಸಿದರು.

ವೃದ್ಧೆ ಲಲಿತಾ, 'ಕೆಲಸ ನಿಮಿತ್ತ ತಿಂಗಳಿಗೊಮ್ಮೆ ಮೇಖ್ರಿ ವೃತ್ತಕ್ಕೆ ಬಂದು ಹೋಗುತ್ತೇನೆ. ಈ ವೇಳೆ ಸ್ಕೈವಾಕ್ ಬಳಸುತ್ತೇನೆ. ಇತ್ತೀಚಿನ ದಿನಗಳಲ್ಲಿ ಲಿಫ್ಟ್ ಇಲ್ಲ. ಹತ್ತಿ ಇಳಿಯಲು ಕಷ್ಟವಾಗುತ್ತಿದೆ' ಎಂದರು.

ರಾಜಧಾನಿ ಜನರ ಧ್ವನಿ

### 'ಸ್ಕೈವಾಕ್ ಭದ್ರತೆಗೆ ಸಿಬ್ಬಂದಿ'

ಸ್ಕೈವಾಕ್‌ನ ಸಮರ್ಪಕ ಬಳಕೆ ಬಗ್ಗೆ ತಿಳಿಹೇಳಲು ಹಾಗೂ ತುರ್ತು ಸಂದರ್ಭದಲ್ಲಿ ಸಹಾಯಕ್ಕೆಂದು ಇಬ್ಬರು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಬೆಳಿಗ್ಗೆಯಿಂದ ಸಂಜೆಯವರೆಗೂ ರಸ್ತೆಯ ಎರಡೂ ಬದಿಯಲ್ಲಿ ನಿಲ್ಲುವ ಸಿಬ್ಬಂದಿ, ಸ್ಕೈವಾಕ್‌ನಲ್ಲಿ ಜನರು ಸುರಕ್ಷಿತವಾಗಿ ಸಂಚರಿಸುವಂತೆ ನೋಡಿಕೊಳ್ಳುತ್ತಿದ್ದಾರೆ.

'ಸ್ಕೈವಾಕ್‌ನಲ್ಲಿ ಯಾರಾದರೂ ಸುಖಾಸುಮ್ಮನೇ ನಿಂತಿದ್ದರೆ, ಓಡಾಡುತ್ತಿದ್ದರೆ ಹಾಗೂ ಆಟವಾಡುತ್ತಿದ್ದರೆ ಅವರನ್ನು ಸ್ಥಳದಿಂದ ಕಳುಹಿಸುತ್ತೇವೆ. ಜೊತೆಗೆ, ನಿತ್ಯವೂ ಸ್ಕೈವಾಕ್ ಸ್ವಚ್ಛಗೊಳಿಸುತ್ತೇವೆ' ಎಂದು ಸಿಬ್ಬಂದಿ ಹೇಳಿದರು.

### 'ಎರಡೂ ಬದಿಯನ್ನೂ ಹೊದಿಕೆಯಿಂದ ಮುಚ್ಚಿ'

'ಸ್ಕೈವಾಕ್ ಕೆಳಗಿನ ರಸ್ತೆಯಲ್ಲಿ ಪ್ರತಿ ಸಮಯದಲ್ಲೂ ವಾಹನಗಳ ಸಾಲು ಇರುತ್ತದೆ. ಸ್ಕೈವಾಕ್‌ನಲ್ಲಿ ನಡೆದುಕೊಂಡು ಹೋಗುವ ಕೆಲವರು, ವಾಹನಗಳ ಸಾಲು ನೋಡಿ ಹೆದರಿ ತಲೆ ಸುತ್ತಿ ಬೀಳುವ ಸಂಭವ ಹೆಚ್ಚಿದೆ. ಇದೇ ಕಾರಣಕ್ಕೆ ಸ್ಕೈವಾಕ್‌ನ ಎರಡೂ ಬದಿಯನ್ನು ಹೊದಿಕೆಯಿಂದ ಮುಚ್ಚಬೇಕು' ಎಂದು ಸ್ಥಳೀಯರು ಆಗ್ರಹಿಸಿದರು.

'ಸ್ಕೈವಾಕ್ ಮೇಲೆ ಮಕ್ಕಳು ಹೆಚ್ಚು ಓಡಾಡುತ್ತಾರೆ. ಕೆಲವರಂತೂ ಅಲ್ಲಿಯೇ ಆಟವಾಡುತ್ತಿರುತ್ತಾರೆ. ಸ್ಕೈವಾಕ್‌ನ ಎರಡೂ ಬದಿಯಲ್ಲೂ ತೆರೆದ ಸ್ಥಳಗಳು ಹೆಚ್ಚಿವೆ. ಅದರಿಂದ ಮಕ್ಕಳು ಆಯತಪ್ಪಿ ರಸ್ತೆಗೆ ಬೀಳುವ ಸಾಧ್ಯತೆ ಇದೆ. ತೆರೆದ ಸ್ಥಳಗಳನ್ನೂ ಸಂಪೂರ್ಣವಾಗಿ ಬಂದ್ ಮಾಡಲು ಆದ್ಯತೆ ನೀಡಬೇಕು' ಎಂದು ಒತ್ತಾಯಿಸಿದರು.

**ನಿಮ್ಮಲ್ಲೂ ಸ್ಕೈವಾಕ್ ಸಮಸ್ಯೆಗಳಿದ್ದರೆ ಬರೆದು ಕಳಿಸಿ**
**9606038256**

### ಲಿಫ್ಟ್ ದುರಸ್ತಿ ಮಾಡಿ



ನಿತ್ಯವೂ ಸ್ಕೈವಾಕ್ ಬಳಸುತ್ತೇನೆ. ಲಿಫ್ಟ್ ಕೆಟ್ಟಿದ್ದರಿಂದ ತುಂಬಾ ತೊಂದರೆ ಆಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಲಿಫ್ಟ್ ದುರಸ್ತಿ ಮಾಡಬೇಕು. ವೃದ್ಧರು, ಶಾಲಾ ಮಕ್ಕಳಿಗೆ ಮತ್ತಷ್ಟು ಅನುಕೂಲ ಆಗುತ್ತದೆ

**ಪ್ರಿಯಾ ಪೊನ್ನಂಮುರುಗನ್**, ಶಿಕ್ಷಕಿ

### ಬಲೆಯನ್ನಾದರೂ ಅಳವಡಿಸಿ



ಸ್ಕೈವಾಕ್‌ನಲ್ಲಿ ಮಕ್ಕಳು ಹೆಚ್ಚಾಗಿ ಓಡಾಡುತ್ತಾರೆ. ಎರಡೂ ಬದಿಯೂ ಕಬ್ಬಿಣದ ರಾಡ್‌ಗಳ ಮಧ್ಯೆ ಹೆಚ್ಚಿನ ಅಂತರವಿದೆ. ಈ ಜಾಗದಲ್ಲಿ ಮಕ್ಕಳು ಬೀಳುವ ಅಪಾಯವಿದೆ. ಸುತ್ತಲೂ ಬಲೆಯನ್ನಾದರೂ ಅಳವಡಿಸಬೇಕು

**ರವಿ**, ಸ್ಥಳೀಯ ನಿವಾಸಿ

## ನಾಯಿ ಕಚ್ಚಿದ್ದ ಪ್ರಕರಣ: ನಟ ದರ್ಶನ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಮಹಿಳಾ ವಕೀಲರೊಬ್ಬರಿಗೆ ಶ್ವಾನ ಕಚ್ಚಿದ್ದ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಟ ದರ್ಶನ್ ಅವರಿಗೆ ರಾಜರಾಜೇಶ್ವರಿನಗರ ಠಾಣೆ ಪೊಲೀಸರು ನೋಟಿಸ್ ನೀಡಿದ್ದು, ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.

'ದರ್ಶನ್ ಮನೆಯ ಸಾಕು ನಾಯಿ, ಬಿಇಎಂಎಲ್ 5ನೇ ಹಂತದ ನಿವಾಸಿಯಾದ ಅಮಿತಾ ಜಿಂದಾಲ್ ಅವರಿಗೆ ಕಚ್ಚಿತ್ತು. ಅ. 28ರಂದು ನಡೆದಿದ್ದ ಘಟನೆ ಸಂಬಂಧ ಅಮಿತಾ ಅವರು ದೂರು ನೀಡಿದ್ದರು. ದರ್ಶನ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಕರಣದ ತನಿಖೆ ನಡೆಸಲಾಗುತ್ತಿದ್ದು, ಈಗಾಗಲೇ ಮಹಜರು ಪ್ರಕ್ರಿಯೆ ಮುಗಿಸಲಾಗಿದೆ. ದರ್ಶನ್ ಅವರ ಮನೆಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ನಾಯಿ ಕಚ್ಚಿದ್ದ ದೃಶ್ಯ ಸೆರೆಯಾಗಿರುವ ಅನುಮಾನವಿದೆ. ಹೀಗಾಗಿ, ಕ್ಯಾಮೆರಾದ ಡಿವಿಆರ್ ಸಮೇತ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ನಿಗದಿತ ದಿನದಂದು ದರ್ಶನ್ ವಿಚಾರಣೆಗೆ ಹಾಜರಾಗಬೇಕು. ಇಲ್ಲದಿದ್ದರೆ, ಕಾನೂನು ಅನ್ವಯ ಕ್ರಮ ಜರುಗಿಸಲಾಗುವುದು' ಎಂದು ಮೂಲಗಳು ಹೇಳಿವೆ.

## ಹಲ್ಲೆಗೆ ಪ್ರತೀಕಾರ: ರೌಡಿ ಕೊಂದಿದ್ದವರ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪುಟ್ಟೇನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ರೌಡಿ ಸಹದೇವ (32) ಕೊಲೆ ಪ್ರಕರಣದಲ್ಲಿ ಎಂಟು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ವಿನಯ್, ಧರ್ಮ, ಕಿರಣ್, ಕಿಶೋರ್, ಗಣೇಶ್, ನಿಶಾಂತ್, ಸುಹೇಬ್ ಹಾಗೂ ಅಕ್ಷಯ್ ಬಂಧಿತರು. ವಿನಯ್ ಹಾಗೂ ಅಕ್ಷಯ, ಅಣ್ಣ-ತಮ್ಮ. ಎಲ್ಲರೂ ಸೇರಿಕೊಂಡು ನ. 8ರಂದು ರಾತ್ರಿ ಸಹದೇವನನ್ನು ಹತ್ಯೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

**ಗಣೇಶ ಹಬ್ಬದಂದು ಗಲಾಟೆ:** 'ರೌಡಿಗಳಾದ ಕಳ್ಳ ನವೀನ್ ಹಾಗೂ ಸಹದೇವ, ಒಟ್ಟಿಗೆ ಸುತ್ತಾಡುತ್ತಿದ್ದರು. ಗಣೇಶ ಹಬ್ಬದ ದಿನದಂದು ಕೋಣನಕುಂಟೆ ಬಳಿ ಹೋಗಿದ್ದರು. ಇದೇ ಸಂದರ್ಭದಲ್ಲಿ ಆರೋಪಿ ವಿನಯ್ ಹಾಗೂ ಅಕ್ಷಯ್ ಜೊತೆ ಜಗಳ ತೆಗೆದು ಹಲ್ಲೆ ಮಾಡಿದ್ದರು. ಈ ಸಂಬಂಧ ಪ್ರಕರಣವೂ ದಾಖಲಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಹಲ್ಲೆಯಿಂದಾಗಿ ವಿನಯ್ ಹಾಗೂ ಅಕ್ಷಯ್, ಗಾಯಗೊಂಡಿದ್ದರು. ಹಲ್ಲೆಗೆ ಪ್ರತೀಕಾರ ತೀರಿಸಿಕೊಳ್ಳಬೇಕೆಂದು ಸ್ನೇಹಿತರ ಜೊತೆ ಮಾತನಾಡಿಕೊಂಡಿದ್ದರು' ಎಂದು ಮೂಲಗಳು ಹೇಳಿವೆ.

**ಕಳ್ಳ ನವೀನ್ ಕೊಲ್ಲಲು ಸಜ್ಜಾಗಿದ್ದರು:** 'ವಿನಯ್ ಹಾಗೂ ಅಕ್ಷಯ್‌ಗೆ ಕಳ್ಳ ನವೀನ್ ಹೆಚ್ಚು ಹೊಡೆದಿದ್ದ. ಹೀಗಾಗಿ, ನವೀನ್‌ನನ್ನು ಕೊಲ್ಲಲು ಆರೋಪಿಗಳು ಸಜ್ಜಾಗಿದ್ದರು. ಪುಟ್ಟೇನಹಳ್ಳಿ ಬಳಿ ನವೀನ್ ಇರುವ ಮಾಹಿತಿ ತಿಳಿದು ನ. 8ರಂದು ರಾತ್ರಿ ಸ್ಥಳಕ್ಕೆ ಹೋಗಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ನವೀನ್ ಇರಲಿಲ್ಲ. ಅದೇ ಸ್ಥಳದಲ್ಲಿ ಸಹದೇವ ಇದ್ದ. 'ನವೀನ್ ಎಲ್ಲಿ' ಎಂದು ಆರೋಪಿಗಳು ಕೇಳಿದ್ದರು. 'ಏಕೆ ಮೊನ್ನೆ ಹೊಡೆದಿದ್ದು ಸಾಕಾಗಿಲ್ಲವೇ? ಸ್ಥಳದಿಂದ ಹೊರಟು ಹೋಗದಿದ್ದರೆ, ಒಂದು ಗತಿ ಕಾಣಿಸುತ್ತೇನೆ' ಎಂದು ಸಹದೇವ ಬೆದರಿಸಿದ್ದ. ಸಿಟ್ಟಾಗಿದ್ದ ವಿನಯ್, ಬೊಂಡಾ ಅಂಗಡಿಯಲ್ಲಿದ್ದ ಸೌಟ್‌ನಿಂದ ಸಹದೇವಗೆ ಹೊಡೆದಿದ್ದ. ಗಲಾಟೆ ಶುರುವಾಗಿತ್ತು. ಎಲ್ಲ ಆರೋಪಿಗಳು, ಮಾರಕಾಸ್ತ್ರಗಳಿಂದ ಸಹದೇವಗೆ ಹೊಡೆದು ಸ್ಥಳದಿಂದ ಪರಾರಿಯಾಗಿದ್ದರು' ಎಂದು ಮೂಲಗಳು ಹೇಳಿವೆ.

# '15 ವರ್ಷ ವನ್ಯಜೀವಿ ಬೇಟೆ ಅವ್ಯಾಹತ'

'ಕೊನೆಯ ಬಿಳಿ ಬೇಟೆಗಾರ' ಕೃತಿ ಬಿಡುಗಡೆ ಸಮಾರಂಭದಲ್ಲಿ ಉಲ್ಲಾಸ್ ಕಾರಂತ್ ಬೇಸರ

ಪ್ರಜಾವಾಣಿ ವಾರ್ತೆ



ನಗರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಸೈನ್ಸ್ ಏಷ್ಯಾದ ನಿರ್ದೇಶಕ ಉಲ್ಲಾಸ್ ಕಾರಂತ್ (ಎಡದಿಂದ ಮೂರನೆಯವರು) ಅವರು 'ಕೊನೆಯ ಬಿಳಿ ಬೇಟೆಗಾರ' ಕೃತಿ ಬಿಡುಗಡೆ ಮಾಡಿದರು. (ಎಡದಿಂದ) ಪ್ರಾಧ್ಯಾಪಕ ಎಸ್.ತ್ಯಾಗರಾಜ್, ಮೂಲ ಲೇಖಕ ಜೋಷುವಾ ಮ್ಯಾಥ್ಯೂ, ಪರಿಸರ ತಜ್ಞ ಬಿ.ಪಿ.ಮಹೇಂದ್ರ ಕುಮಾರ್, ಲೇಖಕ ಕಲೀಂ ಉಲ್ಲಾ, ಲೇಖಕಿ ಎಲ್.ಜಿ.ಮೀರಾ ಇದ್ದರು

**ಬೆಂಗಳೂರು:** 'ರಾಜ್ಯದಲ್ಲಿ 1945ರಿಂದ 1960ರ ಅವಧಿಯಲ್ಲಿ ವನ್ಯಜೀವಿಗಳನ್ನು ಅವ್ಯಾಹತವಾಗಿ ಬೇಟೆ ಆಡಲಾಗಿತ್ತು. ಬೇಟೆಗಾರರಿಗೆ ಅದು ಪರ್ವಕಾಲ ಎನಿಸಿತ್ತು' ಎಂದು ಸೈನ್ಸ್ ಏಷ್ಯಾದ ನಿರ್ದೇಶಕ ಉಲ್ಲಾಸ್ ಕಾರಂತ್ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಎಲ್.ಜಿ.ಮೀರಾ ಅನುವಾದಿಸಿದ ಡೊನಾಲ್ಡ್ ಆ್ಯಂಡರ್ಸನ್ ಅವರ ನೆನಪುಗಳ 'ಕೊನೆಯ ಬಿಳಿ ಬೇಟೆಗಾರ' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ವನ್ಯಜೀವಿಗಳ ಸಂರಕ್ಷಣೆ ಬಗ್ಗೆ ಯಾರಲ್ಲೂ ಆಸಕ್ತಿಯೇ ಇರಲಿಲ್ಲ. 1960ರ ನಂತರವಷ್ಟೇ ವನ್ಯಜೀವಿಗಳ ಸಂರಕ್ಷಣೆ ಬಗ್ಗೆ ಆಸಕ್ತಿ ಬೆಳೆಯಿತು. ಇಂದಿರಾ ಗಾಂಧಿ ಅವರು ಜಾರಿಗೆ ತಂದ ಕಾನೂನುಗಳು, ಸಲೀಂ ಅಲಿ ಪ್ರಭಾವ, ಎಂ.ಕೃಷ್ಣನ್ ಅವರ ಬರವಣಿಗೆಯಿಂದ ಭಾರತೀಯ ವನ್ಯಜೀವಿ ಸಂರಕ್ಷಣಾ ಚಳವಳಿ ಆರಂಭಗೊಂಡಿತ್ತು' ಎಂದು ಹೇಳಿದರು.

'ಕಾಡಿನ ನಿವಾಸಿಗಳು ಪ್ರಾಣಿಗಳನ್ನು ಬೇಟೆ ಆಡುವುದಿಲ್ಲ ಎಂದು ವಾದಿಸುವವರು ಇದ್ದಾರೆ. ಆದರೆ, ಈ ಪುಸ್ತಕ ಓದಿದರೆ ಹೇಗೆ ಶಿಕಾರಿ ನಡೆಸುತ್ತಿದ್ದರು ಎಂಬುದು ತಿಳಿಯಲಿದೆ' ಎಂದರು.

'ದಕ್ಷಿಣ ಕನ್ನಡ, ಕೊಡಗಿನಲ್ಲಿ ಬೇಟೆ ಹಾವಳಿ ವಿಪರೀತವಾಗಿತ್ತು. ಡೊನಾಲ್ಡ್ ಆ್ಯಂಡರ್ಸನ್, ಆಗಸ್ಟಸ್, ವಿದ್ಯಾಚರಣ್ ಶುಕ್ಲ ಅವರಂತಹ ಹಲವರು ಕೊನೆಯ ಹುಲಿಯನ್ನೂ ಬಿಟ್ಟಿರಲಿಲ್ಲ. ಆಗ ಶಿಕಾರಿ ಕಂಪನಿಗಳೇ ಇದ್ದವು' ಎಂದರು.

'ಕೆನೆತ್ ಆ್ಯಂಡರ್ಸನ್ ಪುತ್ರ ಡೊನಾಲ್ಡ್ ಅವರು ಉತ್ತುಂಗಕ್ಕೇರಿ ಕೊನೆಗಾಲದಲ್ಲಿ ಎಲ್ಲವನ್ನೂ ಕಳೆದುಕೊಂಡಿದ್ದರು. ಆ ಸಂದರ್ಭದಲ್ಲಿ ರಿಚ್ಮಂಡ್ ಟೌನ್‌ನ ಮನೆಯೊಂದರಲ್ಲಿ ಮಾಹಿತಿ ಸಂಗ್ರಹಿಸಿ ಶಿಕಾರಿಯ ಬಗ್ಗೆ ಜೋಷುವಾ ಮ್ಯಾಥ್ಯೂ ಪುಸ್ತಕ ರಚಿಸಿದ್ದಾರೆ. ಜೋಷುವಾ ಅವರ ಕೃತಿಯನ್ನು ಕನ್ನಡಕ್ಕೆ ಅನುವಾದಿಸುವಂತೆ ಮನವಿ ಮಾಡಿದಾಗ ಕೆಲವು ಪ್ರಕಾಶಕರು ಹಿಂದೇಟು ಹಾಕಿದ್ದರು. ಇದು ವನ್ಯಜೀವಿ ಸಂರಕ್ಷಣಾ ವಿರೋಧಿ ಪುಸ್ತಕ ಎಂದು ಹೇಳಿದ್ದರು. ವನ್ಯಜೀವಿಗಳನ್ನು ಕಗ್ಗೊಲೆ ಮಾಡಿದ್ದು ಚಾರಿತ್ರಿಕ ದಾಖಲೆ ಆಗಬೇಕು ಎಂಬ ಕಾರಣಕ್ಕೆ ಪ್ರಕಟಿಸಲು ಪ್ರಯತ್ನಿಸಿದ್ದೆ. ಕೊನೆಗೆ ಕನ್ನಡಕ್ಕೆ ಅನುವಾದಗೊಂಡಿದೆ' ಎಂದು ಹೇಳಿದರು.

ಲೇಖಕ ಕಲೀಂ ಉಲ್ಲಾ ಮಾತನಾಡಿ, 'ಡೊನಾಲ್ಡ್ ಆ್ಯಂಡರ್ಸನ್ ಅವರು ಜಾಲಹಳ್ಳಿ, ವೈಟ್ ಫೀಲ್ಡ್‌ನಲ್ಲಿ ಚಿರತೆ, ಹುಲಿಗಳನ್ನು ನಿರಂತರವಾಗಿ ಬೇಟೆಯಾಡಿದ್ದರು. ಅತಿ ಅಮಾನುಷವಾಗಿ ಪ್ರಾಣಿಗಳನ್ನು ಕೊಲ್ಲುತ್ತಿದ್ದರು. ಪ್ರಾಣಿ ಸಂಪತ್ತು ಸಂರಕ್ಷಣೆ ಮಾಡಿದ ಸಾಹಸ ಈ ಕೃತಿಯಲ್ಲಿ ಇಲ್ಲ. ಬದಲಾಗಿ ಪ್ರಾಣಿಗಳನ್ನು ಕೊಲ್ಲುವ ಕಥೆ ಇಲ್ಲಿದೆ' ಎಂದು ಹೇಳಿದರು.

'ಅಹಂ, ಸಂಪರ್ಕ, ಹೆಮ್ಮೆಯಿಂದ ಬೇಟೆ ಆಡುತ್ತಿದ್ದರು. ಬದುಕಿನ ಕೊನೆಗಾಲದಲ್ಲಿ ಕೆನೆತ್ ಅವರು ತಮ್ಮ ಪುತ್ರ ಡೊನಾಲ್ಡ್‌ಗೆ ಬೇಟೆಯಾಡುವುದನ್ನು ನಿಲ್ಲಿಸುವಂತೆ ಮನವಿ ಮಾಡಿದ್ದರು. ಆ ಹೊತ್ತಿಗೆ ವನ್ಯಜೀವಿ ಸಂಪತ್ತು ನಾಶವಾಗಿತ್ತು' ಎಂದು ಬೇಸರಿಸಿದರು.

### ಕೃತಿ ಪರಿಚಯ

ಕೃತಿ: ಕೊನೆಯ ಬಿಳಿ ಬೇಟೆಗಾರ
ಇಂಗ್ಲಿಷ್ ನಿರೂಪಣೆ: ಜೋಷುವಾ ಮ್ಯಾಥ್ಯೂ
ಕನ್ನಡಕ್ಕೆ: ಎಲ್.ಜಿ.ಮೀರಾ
ಬೆಲೆ: ₹395
ಪುಟಗಳು: 383
ಪ್ರಕಾಶನ: ಆಕೃತಿ

## ಟಿಪ್ಪರ್ ಚಕ್ರ ಹರಿದು ಪಿಯು ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹೆಣ್ಣೂರು ಠಾಣೆ ವ್ಯಾಪ್ತಿಯಲ್ಲಿ ಶನಿವಾರ ಅಪಘಾತ ಸಂಭವಿಸಿದ್ದು, ಟಿಪ್ಪರ್ ಚಕ್ರ ತಲೆ ಮೇಲೆ ಹರಿದು ಪಿಯು ವಿದ್ಯಾರ್ಥಿ ಯೋಗದೀಪ (17) ಮೃತಪಟ್ಟಿದ್ದಾರೆ.

'ಚನ್ನರಾಯಪಟ್ಟಣದ ಯೋಗದೀಪ, ನಗರದ ಕಣ್ಣೂರಿನಲ್ಲಿ ಪೋಷಕರ ಜೊತೆ ವಾಸವಿದ್ದರು. ತಂದೆ, ಲೋಕೋಪಯೋಗಿ ಇಲಾಖೆಯಲ್ಲಿ ಎಂಜಿನಿಯರ್ ಆಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ತಂದೆಗೆ ಶನಿವಾರ ರಜೆ ಇತ್ತು. ಅವರು ಮನೆಯಲ್ಲಿದ್ದರು. ಶನಿವಾರ ಬೆಳಿಗ್ಗೆ ಕಾಲೇಜಿಗೆ ತೆರಳಲು ಸಿದ್ಧವಾಗಿದ್ದ ಯೋಗದೀಪ, ತಂದೆಯ ದ್ವಿಚಕ್ರ ವಾಹನ ತೆಗೆದುಕೊಂಡು ಮನೆಯಿಂದ ಹೊರಟಿದ್ದ. ಆದರೆ, ಆತನ ಬಳಿ ಚಾಲನಾ ಪರವಾನಗಿ ಇರಲಿಲ್ಲ.'

'ಕೋಗಿಲು ರಸ್ತೆಯಲ್ಲಿ ಹೊರಟಿದ್ದಾಗ ದ್ವಿಚಕ್ರ ವಾಹನಕ್ಕೆ ಟಿಪ್ಪರ್ ಡಿಕ್ಕಿ ಹೊಡೆದಿತ್ತು. ವಾಹನ ಸಮೇತ ರಸ್ತೆಯಲ್ಲಿ ಬಿದ್ದಿದ್ದ ಯೋಗದೀಪ ತಲೆ ಮೇಲೆಯೇ ಟಿಪ್ಪರ್‌ನ ಹಿಂಬದಿ ಚಕ್ರ ಹರಿದಿತ್ತು. ತೀವ್ರ ಗಾಯಗೊಂಡು ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

**ಪೋಷಕರ ವಿರುದ್ಧ ಕ್ರಮ:** 'ಮಕ್ಕಳ ಕೈಗೆ ವಾಹನ ನೀಡುವುದು ನಿಯಮಬಾಹಿರ. ಇಂಥ ಪ್ರಕರಣಗಳಲ್ಲಿ ಪೋಷಕರ ವಿರುದ್ಧ ಕಾನೂನು ಕ್ರಮ ಜರುಗಿಸಲು ಅವಕಾಶವಿದೆ. ಹೀಗಾಗಿ, ಪೋಷಕರು ಎಚ್ಚರಿಕೆ ವಹಿಸಬೇಕು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

## ರಾಜಾಜಿನಗರ: ಕಲ್ಲು ಎತ್ತಿ ಹಾಕಿ ವ್ಯಕ್ತಿ ಕೊಲೆ

**ಬೆಂಗಳೂರು:** ರಾಜಾಜಿನಗರ ಠಾಣೆ ವ್ಯಾಪ್ತಿಯಲ್ಲಿ ಶುಕ್ರವಾರ ತಡರಾತ್ರಿ ವ್ಯಕ್ತಿಯೊಬ್ಬರ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಲಾಗಿದೆ.

'ಮೃತ ವ್ಯಕ್ತಿಯ ಹೆಸರು ಗೊತ್ತಾಗಿಲ್ಲ. 45 ವರ್ಷದಿಂದ 50 ವರ್ಷ ವಯಸ್ಸಿರಬಹುದೆಂದು ಅಂದಾಜಿಸಲಾಗಿದೆ. ಮೃತದೇಹವನ್ನು ಆಸ್ಪತ್ರೆಯಲ್ಲಿ ಇರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನವರಂಗ ವೃತ್ತ ಹಾಗೂ ಸುತ್ತಮುತ್ತಲಿನ ಪಾದಚಾರಿ ಮಾರ್ಗದಲ್ಲಿ ವ್ಯಕ್ತಿ ನಿತ್ಯವೂ ಮಲಗುತ್ತಿದ್ದರೆಂದು ಸ್ಥಳೀಯರಿಂದ ಗೊತ್ತಾಗಿದೆ. ಮಲಗಿದ್ದ ಸ್ಥಳದಲ್ಲಿಯೇ ವ್ಯಕ್ತಿ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ. ತನಿಖೆ ನಡೆಯುತ್ತಿದೆ' ಎಂದು ತಿಳಿಸಿವೆ.

## 'ನ್ಯಾಯ ನಿರ್ಣಯ ಕ್ಷೀಣಿಸುತ್ತಿದೆ'

**ನೆಲಮಂಗಲ:** 'ನ್ಯಾಯ ನಿರ್ಣಯಕ್ಕೆ ಅಗತ್ಯ ಪೂರಕ ವ್ಯವಸ್ಥೆ ತೃಪ್ತಿದಾಯಕವಾಗಿಲ್ಲದೇ ಇರುವುದರಿಂದ ಸಾಮಾನ್ಯರಿಗೆ ನಿರೀಕ್ಷಿತ ಮಟ್ಟದ ನ್ಯಾಯ ದಕ್ಕುತ್ತಿಲ್ಲ' ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ವಿಷಾದಿಸಿದರು.

ಅಮೆರಿಕದಲ್ಲಿ ಹೃದಯ ತಜ್ಞರಾಗಿರುವ ಡಾ.ಕೆ.ಎ.ಗೌಡ ಮತ್ತು ವಕೀಲ ಕೆ. ಕೇಶವಮೂರ್ತಿ ಸಹೋದರರ ಸುವರ್ಣ ಸೇವಾ ಸಂಭ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಮಾತನಾಡಿ, 'ವ್ಯಕ್ತಿಗೆ ಸಾವಿದೆ. ವ್ಯಕ್ತಿತ್ವಕ್ಕೆ ಸಾವಿಲ್ಲ, ಸಮಾಜ ಸೇವೆಯಿಂದ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಆದಿಚುಂಚನಗಿರಿ ನಿರ್ಮಲಾನಂದನಾಥ ಸ್ವಾಮೀಜಿ, ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ, ರಾಜ್ಯ ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ. ರಂಗನಾಥ, ಎಂಎಲ್‌ಸಿ ಕೃಷ್ಣಪ್ಪ, ಹರ್ಷ ಸಮೂಹ ಸಂಸ್ಥೆಯ ಅಧ್ಯಕ್ಷ ಎಸ್. ಶಿವಕುಮಾರ್ ಇತರರು ಇದ್ದರು.

## ಮೂವರನ್ನು ಬಂಧಿಸಿದ ಇ.ಡಿ

**ನವದೆಹಲಿ (ಪಿಟಿಐ):** ದೆಹಲಿ ವಕ್ಫ್ ಬೋರ್ಡ್ ಸಿಬ್ಬಂದಿ ನೇಮಕಾತಿಯಲ್ಲಿ ನಡೆದಿರುವ ಅವ್ಯವಹಾರಕ್ಕೆ ನಂಟಿರುವ ಹಣ ಅಕ್ರಮ ವರ್ಗಾವಣೆ ಆರೋಪದಡಿ ಎಎಪಿ ಶಾಸಕ ಅಮಾನತ್ ಉಲ್ಲಾ ಖಾನ್ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ಮೂವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿದೆ ಎಂದು ಅಧಿಕೃತ ಮೂಲಗಳು ಶನಿವಾರ ತಿಳಿಸಿವೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಮೂವರನ್ನು ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ಬಂಧಿತರ ವಿವರಗಳು ತಕ್ಷಣಕ್ಕೆ ಬಹಿರಂಗವಾಗಿಲ್ಲ ಎಂದು ಮೂಲಗಳು ಹೇಳಿವೆ.

ದೆಹಲಿಯ ಓಖ್ಲಾ ಕ್ಷೇತ್ರದ ಶಾಸಕ ಖಾನ್ ಅವರಿಗೆ ಸಂಬಂಧಿಸಿದ ಹಲವು ಜಾಗಗಳ ಮೇಲೆ ಇ.ಡಿ ಕಳೆದ ತಿಂಗಳು ದಾಳಿ ನಡೆಸಿತ್ತು.

ಯರಗೋಳ್ ಜಲಾಶಯ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

# 'ಕಾಂಗ್ರೆಸ್ ಸರ್ಕಾರದಲ್ಲೇ ಎತ್ತಿನಹೊಳೆ ಜಾರಿ'

ಪ್ರಜಾವಾಣಿ ವಾರ್ತೆ

**ಬಂಗಾರಪೇಟೆ (ಕೋಲಾರ ಜಿಲ್ಲೆ):** 'ನಮ್ಮ ಸರ್ಕಾರದ ಅವಧಿಯಲ್ಲೇ ಎತ್ತಿನಹೊಳೆ ಯೋಜನೆ ಕಾಮಗಾರಿ ಸಂಪೂರ್ಣ ಮುಗಿಸಿ ಬೆಂಗಳೂರು ಗ್ರಾಮಾಂತರ, ಹಾಸನ, ತುಮಕೂರು, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗೆ ಕುಡಿಯುವ ನೀರು ಹರಿಸುತ್ತೇವೆ. ನಮ್ಮನ್ನು ಟೀಕಿಸುವವರ ಹೊಟ್ಟೆ ಉರಿಯುವಂತೆ ಮಾಡುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ತಾಲ್ಲೂಕಿನ ಯರಗೋಳ್ ಗ್ರಾಮದಲ್ಲಿ ಶನಿವಾರ ಕುಡಿಯುವ ನೀರಿನ ಉದ್ದೇಶದ ಯರಗೋಳ್ ಜಲಾಶಯ ಉದ್ಘಾಟಿಸಿ ಮಾತನಾಡಿದರು.


'ಈ ಯೋಜನೆಗೆ ಅನುದಾನವನ್ನು ₹23 ಸಾವಿರ ಕೋಟಿಗೆ ಹೆಚ್ಚಿಸಲಾಗಿದೆ. ಎತ್ತಿನಹೊಳೆ ಯೋಜನೆ ರೂಪಿಸಿದ್ದು ಯಾರು? ವಿಳಂಬ ಮಾಡಿದ್ದು ಯಾರು? ಯೋಜನೆಯಿಂದ ನೀರು ಬರುವುದಿಲ್ಲ ಎಂದು ಟೀಕಿಸಿದ್ದು ಯಾರು? ಕಳೆದ ಐದು ವರ್ಷಗಳ ಅವಧಿಯಲ್ಲಿ ಜಾರಿ ಆಗಲಿಲ್ಲ. ತ್ವರಿತಗತಿಯಲ್ಲಿ ಯೋಜನೆ ಜಾರಿಯಾಗಿದ್ದರೆ ಇಷ್ಟರಲ್ಲಿ ನೀರು ದೊರಕುತಿತ್ತು' ಎಂದರು.

'ಕೆ.ಸಿ.ವ್ಯಾಲಿ ಯೋಜನೆ ಜಾರಿ ಮಾಡಬಾರದು. ಅದರ ಮೂಲಕ ಜನರಿಗೆ ವಿಷ ನೀಡಲಾಗುತ್ತಿದೆ' ಎಂಬುದಾಗಿ ಎಚ್.ಡಿ.ಕುಮಾರಸ್ವಾಮಿ ಹೇಳುತ್ತಾರೆ. ಯೋಜನೆಯಿಂದ ಕೆರೆಗಳು ತುಂಬಿವೆ. ದನಕರುಗಳಿಗೆ ಮೇವು ಸಿಕ್ಕಿದೆ. ಈವರೆಗೆ ಜನ, ದನ, ಕರುಗಳು ಸತ್ತ ಉದಾಹರಣೆ ಇದೆಯೇ? ಕುಮಾರಸ್ವಾಮಿಗೆ ಜನರೇ ಉತ್ತರ ಕೊಡಬೇಕು. ಕೆ.ಸಿ.ವ್ಯಾಲಿ ಬಗ್ಗೆ ವಿಶ್ವಸಂಸ್ಥೆಯಿಂದ ನಮಗೆ ಶಹಬ್ಬಾಸ್‌ಗಿರಿ ಸಿಕ್ಕಿದೆ ಮಿಸ್ಟರ್ ಕುಮಾರಸ್ವಾಮಿ. ರಾಜಕಿಯಕ್ಕಾಗಿ ಟೀಕಿಸಬೇಡಿ' ಎಂದರು.

ಸಚಿವರಾದ ಬೈರತಿ ಸುರೇಶ್, ಕೆ.ಎಚ್.ಮುನಿಯಪ್ಪ, ಡಾ.ಎಚ್.ಸಿ. ಮಹದೇವಪ್ಪ, ಕೃಷ್ಣಬೈರೇಗೌಡ, ಕೆ.ಜೆ. ಜಾರ್ಜ್, ರಾಮಲಿಂಗಾರೆಡ್ಡಿ, ಎಂ.ಸಿ. ಸುಧಾಕರ್ ಇತರರು ಇದ್ದರು.

**ಪ್ರತಿ ಜಿಲ್ಲೆಗೆ ಮತ್ತಷ್ಟು ಬರ ಪರಿಹಾರ ನೀಡಲಾಗುವುದು. ಕುಡಿಯುವ ನೀರು, ಜಾನುವಾರು ಮೇವಿಗೆ ಎಷ್ಟು ಬೇಕಾದರೂ ಹಣ ನೀಡಲು ಸಿದ್ಧ. ಗುಳೆ ಹೋಗದಂತೆ ನೋಡಿಕೊಳ್ಳುತ್ತೇವೆ**

**ಸಿದ್ದರಾಮಯ್ಯ**, ಮುಖ್ಯಮಂತ್ರಿ



ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಯರಗೋಳ್ ಗ್ರಾಮದಲ್ಲಿ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಯರಗೋಳ್ ಜಲಾಶಯ ಉದ್ಘಾಟಿಸಿದರು. ಎಂ.ಎಲ್.ಅನಿಲ್ ಕುಮಾರ್, ಕೆ.ಎಚ್.ಮುನಿಯಪ್ಪ, ಡಾ.ಎಚ್.ಸಿ. ಮಹದೇವಪ್ಪ, ಎಸ್.ಎನ್.ನಾರಾಯಣಸ್ವಾಮಿ, ನಸೀರ್ ಅಹ್ಮದ್, ಅಕ್ರಂ ಪಾಷ ಇದ್ದಾರೆ


TIMKEN

ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230

ನೋಂದಣಿ ಕಛೇರಿ: 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100
ದೂರವಾಣಿ : 080 41362000 ಫ್ಯಾಕ್ಸ್ : 080 41362010 ಇ-ಮೇಲ್ : tilinvestor@timken.com
ವೆಬ್‌ಸೈಟ್ : www.timken.com/en-in

ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ಸೆಪ್ಟಂಬರ್ 30, 2021ಕ್ಕೆ ಕೊನೆಗೊಂಡ ತ್ರೈಮಾಸಿಕ ಹಾಗೂ ಅರ್ಧ ವಾರ್ಷಿಕ ಅವಧಿಯ ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶದ ಪ್ರತ್ಯೇಕವಾದ ಸಾರಾಂಶ

(ರೂ. ದಶಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | 30/09/2023 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಲ್ಲದ) | 30/09/2022 ಕ್ಕೆ ಕೊನೆಗೊಂಡ ಕಳೆದ ವರ್ಷದ ತ್ರೈಮಾಸಿಕಕ್ಕೆ ಅನುಗುಣವಾಗಿ (ಪರಿಶೋಧಿತವಲ್ಲದ) | 31/03/2023 ಕ್ಕೆ ಕೊನೆಗೊಂಡ ವಾರ್ಷಿಕ (ಪರಿಶೋಧಿತವಾದ) |
|---|---|---|---|---|
| 1. | ಕಾರ್ಯಾಚರಣೆಯಿಂದ ಒಟ್ಟು ಆದಾಯ (ನಿವ್ವಳ) | 6,920.71 | 7,169.49 | 28,597.85 |
| 2. | ನಿವ್ವಳ ಲಾಭ / (ನಷ್ಟ) ಈ ಅವಧಿಗೆ (ತೆರಿಗೆ, ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ಮುನ್ನ) | 1,236.25 | 1,314.49 | 5,235.21 |
| 3. | ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ಮುನ್ನ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ) | 1,236.25 | 1,314.49 | 5,235.21 |
| 4. | ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ನಂತರ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ) | 930.46 | 975.99 | 3,907.45 |
| 5. | ಈ ಅವಧಿಯ ಒಟ್ಟು ಸಮಗ್ರ ಆದಾಯ {ಲಾಭ/(ನಷ್ಟ) ಒಳಗೊಂಡಂತೆ ಈ ಅವಧಿಗೆ (ತೆರಿಗೆ ನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆ ನಂತರ)} | (0.90) | (2.04) | 7.68 |
| 6. | ಈಕ್ವಿಟಿ ಷೇರು ಬಂಡವಾಳ | 752.19 | 752.19 | 752.19 |
| 7. | ಪ್ರತಿ ಷೇರಿನ ಗಳಿಕೆಗಳು (ಪ್ರತಿ ರೂ.10/– ರಂತೆ) (ನಿರಂತರ ಕಾರ್ಯಾಚರಣೆಗಳಿಗೆ) ಮೂಲತವಾದ ಮತ್ತು ದುರ್ಬಲಗೊಳಿಸಿದ *ವಾರ್ಷಿಕವಲ್ಲದ | 12.37* | 12.98* | 51.95 |

ಮೇಲೆ ತಿಳಿಸಿರುವ ಫಲಿತಾಂಶವು ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ತ್ರೈಮಾಸಿಕ ಅವಧಿಯ ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶದ ಸಂಪೂರ್ಣವಾದ ನಮೂನೆಯ ಪ್ರತ್ಯೇಕವಾದ ಸಾರಾಂಶ. ತ್ರೈಮಾಸಿಕದ ಆರ್ಥಿಕ ಫಲಿತಾಂಶದ ಪೂರ್ಣ ನಮೂನೆಯು ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ (BSE: www.bseindia.com & NSE: www.nseindia.com) ಮತ್ತು ಕಂಪನಿ ವೆಬ್‌ಸೈಟ್ www.timken.com/en-in ನಲ್ಲಿ ವೀಕ್ಷಿಸಬಹುದು.

ಮಂಡಳಿಯ ಆದೇಶದಂತೆ
ಸಹಿ/– ಸಂಜಯ್ ಕೌಲ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
DIN : 05159352

ಬೆಂಗಳೂರು
10 ನವೆಂಬರ್, 2023